11–30 a.m.

1. ಪ್ರಕಟಣೆ

ವಿಷಯ :– ಶ್ರೀ ಮಹಿಮಾ ಜೆ. ಪಟೇಲ್‌ರವರು ವಿಧಾನಸಭೆಯ ಸದಸ್ಯತ್ವಕ್ಕೆ ನೀಡಿರುವ ರಾಜೀನಾಮೆಯನ್ನು ಅಂಗೀಕರಿಸುವ ಬಗ್ಗೆ.

ಅಧ್ಯಕ್ಷರು: ಚೆನ್ನಗಿರಿ ವಿಧಾನಸಭಾ ಕ್ಷೇತ್ರ ಸಂಖ್ಯೆ 158 ರಿಂದ 12ನೇ ವಿಧಾನಸಭೆಗೆ ಚುನಾಯಿತರಾಗಿದ್ದ ಶ್ರೀ ಮಹಿಮಾ ಜೆ. ಪಟೇಲ್‌ರವರು ವಿಧಾನಸಭೆಯ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದು ಸದರಿ ರಾಜೀನಾಮೆಯನ್ನು ದಿನಾಂಕ 16ನೇ ನವೆಂಬರ್ 2007 ರಂದು ಅಂಗೀಕರಿಸಲಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ತಾವು ಪ್ರಕಟಣೆ ಮಾಡಿರತಕ್ಕಂಥ ವಿಚಾರದ ಬಗ್ಗೆ ನಾನು ಒಂದು ಮಾತು ಹೇಳಬೇಕಾಗಿದೆ. ಮಾನ್ಯ ಮಹಿಮಾ ಪಟೇಲ್‌ರವರು ಯುವಕರಿದ್ದಾರೆ. ಅವರನ್ನು ಕರೆಸಿ ತಾವು ಮಾತನಾಡಿದ್ದೀರಾ? ದಯವಿಟ್ಟು ತಾವು ಅವರನ್ನು ಸಭೆಗೆ ಕರೆಸಿ.

ಅಧ್ಯಕ್ಷರು: ಕರೆಸಿ ಮಾತನಾಡಿದ್ದೇನೆ. ನಿಯಮಗಳಿಗನುಸಾರವಾಗಿ ಅವರ ಹತ್ತಿರ ಮಾತನಾಡಿ.....

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಅವರು ಯುವಕರಿದ್ದಾರೆ. ಮೊದಲನೆ ಬಾರಿಗೆ ವಿಧಾನಸಭೆಗೆ ಗೆದ್ದು ಬಂದಿದ್ದಾರೆ. ಜೊತೆಗೆ ಒಂದು ತತ್ವನಿಷ್ಠ ರಾಜಕಾರಣ ಮಾಡುತ್ತಿದ್ದಾರೆ. ಈ ಸದನ ಮತ್ತು ತಾವು ಅವರನ್ನು ಕರೆದು advise ಮಾಡುವುದು ಒಳ್ಳೆಯದೆಂಬುದು ನನ್ನ ಅಭಿಪ್ರಾಯವಾಗಿದೆ. ಅವರು ಹೊಸದಾಗಿ ಗೆದ್ದು ಬಂದು ಇನ್ನೂ 19–20 ತಿಂಗಳು ಆಗಿವೆ. ಬಹಳ ದೊಡ್ಡ ಆಕಾಂಕ್ಷೆಗಳನ್ನು, ಆದರ್ಶಗಳನ್ನು ಇಟ್ಟುಕೊಂಡಿದ್ದು, ಮಾನ್ಯ ಜೆ.ಎಚ್.ಪಟೇಲ್‌ರವರು ಯಾವ ದಾರಿಯಲ್ಲಿ ಕರ್ನಾಟಕದಲ್ಲಿ 50 ವರ್ಷ ನಡೆದರೋ ಅದೇ ದಾರಿಯಲ್ಲಿ ಮಹಿಮಾ ಪಟೇಲ್‌ರವರು ಹೋಗುತ್ತಿದ್ದಾರೆ. ಆದ್ದರಿಂದ, ತಾವು ಸ್ವೀಕಾರ ಮಾಡತಕ್ಕಂಥದ್ದು ತಮ್ಮ ಹಕ್ಕು, ಅದನ್ನು ಚಲಾಯಿಸಲಿಕ್ಕೆ ನಮ್ಮದೇನೂ ತಕರಾರು ಇಲ್ಲ. ಆದರೆ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ರೀತಿ ಸದನದ ಹೊಸ ಸದಸ್ಯರು ಗೆದ್ದು ಬಂದಂಥ ಸಂದರ್ಭಗಳಲ್ಲಿ, ಅನೇಕ ಸಂದರ್ಭಗಳಲ್ಲಿ ಇವತ್ತಿನ

ಪ್ರಚಲಿತ ವಿಷಪೂರಿತ ರಾಜಕಾರಣದ ಹಿನ್ನೆಲೆಯಲ್ಲಿ ಆ ರೀತಿ ಅವರೇನಾದರೂ ಮಾಡಿರುವುದನ್ನು ತಾವು ದಯವಿಟ್ಟು ಕರೆಸಿ ಹೇಳಬೇಕು. ದಯವಿಟ್ಟು ಅದನ್ನು ಅಂಗೀಕಾರ ಮಾಡಬೇಡಿ ಎಂದು ನಾನು ಒತ್ತಾಯ ಮಾಡುತ್ತೇನೆ. ದಯವಿಟ್ಟು ಅಂಗೀಕಾರ ಮಾಡಬೇಡಿ.

ಅಧ್ಯಕ್ಷರು: ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಅವರನ್ನು ಕರೆದು ಕೇಳಿ ಇನ್ನೊಂದು ಸಲ advise ಮಾಡಿ. ಮಹಿಮಾ ಪಟೇಲ್‌ರವರು ಸಮರ್ಥ ನಾಯಕರಾಗತಕ್ಕಂಥ ಎಲ್ಲಾ ಲಕ್ಷಣಗಳನ್ನು ತೋರಿಸಿದ್ದಾರೆ. ಅವರೊಬ್ಬ ಜಾತ್ಯಾತೀತ ಮುಖಂಡರಿದ್ದಾರೆ, ತತ್ವನಿಷ್ಠ ರಾಜಕಾರಣಿಯಾಗಿದ್ದಾರೆ. ತಾವು ದಯವಿಟ್ಟು ಅವರನ್ನು ಕರೆಸಿ ಹೇಳಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ತಾವು ಅಧ್ಯಕ್ಷರಾಗಿ ಎಷ್ಟು ದಿವಸ ಇರುತ್ತೀರೋ ಗೊತ್ತಿಲ್ಲ. ಆ ವಿಚಾರ ಬೇರೆ. ಸಂತೋಷ ಇರಿ. ನಮಗೆ ಬಹಳ ಸಂತೋಷ. ಅದರ ಬಗ್ಗೆ ನಮ್ಮದೇನೂ ಚಿಂತೆ ಇಲ್ಲ. ನಿಮ್ಮ ಕಾಲದಲ್ಲಿ ಒಬ್ಬ ಸದಸ್ಯರು ವಿನಾಕಾರಣ ಸದಸ್ಯತ್ವ ಕಳೆದುಕೊಂಡರು ಎನ್ನುವ ಭಾವನೆ ಸಾರ್ವಜನಿಕರಲ್ಲಿ ಬರುವುದು ಬೇಡ.ಅವರನ್ನು ಕರೆದು ಮಾತನಾಡಿ.

ಅಧ್ಯಕ್ಷರು: ವಿನಾಕಾರಣ ಅಲ್ಲ. ಅವರು ಸ್ವ ಇಚ್ಚೆಯಿಂದ ರಾಜೀನಾಮೆ ಕೊಟ್ಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಆದರೂ ಇಂಥ ವಿಚಾರದಲ್ಲಿ.....

ಅಧ್ಯಕ್ಷರು: ವಾಟಾಳ್ ನಾಗರಾಜ್‌ರವರೆ, ಇಷ್ಟು ಲಘುವಾಗಿ ಮಾತನಾಡುವುದು ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್: ನಾನು ಒಪ್ಪುತ್ತೇನೆ.

ಅಧ್ಯಕ್ಷರು: ಲಘುವಾಗಿ ಮಾತನಾಡತಕ್ಕಂಥದ್ದು ಸರಿಯಲ್ಲ. ಅವರು ಸ್ವಇಚ್ಛೆಯಿಂದ ರಾಜೀನಾಮೆ ಕೊಟ್ಟಿದ್ದಾರೆ. ಅವರ ಜೊತೆ ಮಾತನಾಡಿದ್ದೇನೆ. "ಇನ್ನೂ ನೀವು ಯುವಕರಿದ್ದೀರಿ, ನಿಮಗೆ ಭವಿಷ್ಯ ಇದೆ. ನೀವು ಯಾವುದೋ ಒಂದು ಕ್ಷಣಿಕ ತೀರ್ಮಾನ ತೆಗೆದುಕೊಂಡು ರಾಜೀನಾಮೆ ಕೊಡಬೇಡಿ" ಎಂದು ನಾನು ಹೇಳಿದೆ. ಆದರೆ, ಅವರು ದೃಢ ನಿರ್ಧಾರ ಮಾಡಿ ನಾನು

ಸ್ವಇಚ್ಛೆಯಿಂದ ಕೊಡುತ್ತಿದ್ದೇನೆ, ದಯವಿಟ್ಟು ಅಂಗೀಕರಿಸಬೇಕಂದು ಒತ್ತಾಯಪೂರ್ವಕವಾಗಿ ಹೇಳಿದ್ದರಿಂದ ಅಂಗೀಕರಿಸಲಾಗಿದೆ. ಅದನ್ನು ಪ್ರಕಟಣೆ ಮಾಡಿದ್ದೇನೆ. ದಯಮಾಡಿ ಸಹಕರಿಸಬೇಕು.

ಶ್ರೀ ಕೆ.ಆರ್. ರಮೇಶ್ ಕುಮಾರ್: ಸದಸ್ಯರು ರಾಜೀನಾಮೆ ಕೊಟ್ಟಾಗ ಯಾವುದೇ ರೀತಿ ಭಾವೋದ್ವೇಗಕ್ಕೆ ಒಳಗಾಗಿದ್ದರೆ, ಮಾನಸಿಕ ಉದ್ವಿಗ್ನತೆಗೆ ಒಳಗಾಗಿದ್ದರೆ ಅಥವಾ ಪರಿಸರದಲ್ಲಿ ಆಗುವ ಕೆಲವು ಬೆಳವಣಿಗೆಗಳಿಂದ ಬೇಸರಗೊಂಡಿದ್ದರೆ ಅವರು ಸಮಚಿತ್ತಕ್ಕೆ ಬರುವವರೆಗೆ ನಾವು ಅವರನ್ನು ಬಿಡಬೇಕಾಗುತ್ತದೆ. ಅವರ ಜೊತೆಗೆ ಸಹಕರಿಸಿ, ಒಂದು ಅವಕಾಶವನ್ನು ಕೊಟ್ಟು ಏಕೆ ಹೀಗೆ ದುಡುಕುತ್ತೀರಿ ಎಂದು ಹೇಳಬೇಕಾಗಿತ್ತು. ಬಣಕಾರ್ ರವರು ಅಧ್ಯಕ್ಷರಾಗಿದ್ದಾಗ ನಾನೇ ಒಂದು ಸಲ ರಾಜೀನಾಮೆ ಕೊಟ್ಟು ಊರಿಗೆ ಹೊರಟು ಹೋಗಿದ್ದೆ. ಅವರು ನನ್ನನ್ನು ಬಿಡಲಿಲ್ಲ. ಸುಮಾರು 11 ದಿವಸ ಕಾಯ್ದು ನನ್ನನ್ನು ಕರೆಸಿ, ಬಲವಂತ ಮಾಡಿ ಆಮೇಲೆ ಮಾನ್ಯ ಹೆಗಡೆಯವರು, ಅವರು ನನ್ನ ರಾಜೀನಾಮೆಯನ್ನು ವಾಪಸ್ಸು ಮಾಡುವಂತೆ ಮಾಡಿದರು. ಅನೇಕ ಸಂದರ್ಭಗಳಲ್ಲಿ ಹೀಗೆ ಆಗಿವೆ. ತಾವು ಅವೆಲ್ಲವನ್ನು ಮಾಡಿಲ್ಲವೆಂದು ನಾನು ಹೇಳುವುದಿಲ್ಲ. ತಾವು ಅನುಭವಿಗಳಿದ್ದೀರಿ. ಸಾಕಷ್ಟು ದೀರ್ಘಕಾಲ ಈ ಸದನದಲ್ಲಿ ಕೆಲಸ ಮಾಡಿದ್ದೀರಿ. ಆದರೆ, ಗೆಳೆಯರಾದ ಮಾನ್ಯ ಸಿಂಧ್ಯಾರವರು ಹೇಳಿದ ಹಾಗೆ ಎಲ್ಲೋ ಒಂದು ಕಡೆಗೆ ನಮಗೆ ಆ ಬಾಂಧವ್ಯ, ಅವರ ತಂದೆಯವರ ಜೊತೆಗಿದ್ದಂಥ ಬಾಂಧವ್ಯ, ಎಳೆ ವಯಸ್ಸಿನ ಶಾಸಕರು, ಒಂದು ರೀತಿಯಲ್ಲಿ ತಮ್ಮದ್ದೇ ಆದಂಥ ಕೆಲಸ ಮಾಡುತ್ತಿದ್ದರು. ಅವಕಾಶವನ್ನೇನಾದರು ಕೊಡುವುದಕ್ಕೆ ಸಾಧ್ಯವಿರುವುದಾದರೆ, ಅವರ ಮನವೊಲಿಸುವುದಕ್ಕೆ ಸಾಧ್ಯವಾಗುವುದಾದರೆ ಸಾರ್ವಜನಿಕ ಜೀವನಕ್ಕೆ, ಈ ಸದನಕ್ಕೆ ನಷ್ಟವಾಗುವುದು ಬೇಡವೆನ್ನುವ ದೃಷ್ಟಿಯಿಂದ ತಮ್ಮಲ್ಲಿ ಅತ್ಯಂತ ಸವಿನಯದಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ. ಉಳಿದದ್ದು ತಮ್ಮ ವಿವೇಚನಗೆ ಬಿಡುತ್ತೇನೆ.

ಅಧ್ಯಕ್ಷರು: ಈಗ ಸಂತಾಪ ಸೂಚನೆಗಳು.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ಈ ಸದನದಿಂದ ತಾವು ಆ ಪೀಠದಲ್ಲಿ ಕುಳಿತುಕೊಂಡಿತರಕ್ಕಂಥದ್ದು ಇದೆ. ಈ ಸದನದ ಎಲ್ಲಾ

ಸರ್ವಪಕ್ಷದ ಸದಸ್ಯರು ಸಹ ಅಭಿಪ್ರಾಯ ಕೊಡುತ್ತಾರೆ. ಅಂದರೆ ಅದು ರಾಜ್ಯದ ಜನರ ಅಭಿಪ್ರಾಯವೆಂದಾಗುತ್ತದೆ. ಯಾರೂ ಸಹಿತ ಮಹಿಮಾ ಪಟೇಲ್‌ರವರು ರಾಜೀನಾಮೆ ಕೊಡಬೇಕು, ಅವರು ಈ ಸದನವನ್ನು ಬಿಟ್ಟು ಹೋಗಬೇಕೆಂದು ಬಯಸುವುದಿಲ್ಲ. ಆದ್ದರಿಂದ, ತಾವು ಇದನ್ನು ತಡೆಹಿಡಿದು.....

ಅಧ್ಯಕ್ಷರು: ಸಿಂಧ್ಯಾರವರೆ, ಯಾರೂ ಇದನ್ನು ಬಯಸುವುದಿಲ್ಲ. ಅವರು ಸ್ವಇಚ್ಛೆಯಿಂದ ರಾಜೀನಾಮೆ ನೀಡಿದ್ದಾರೆ. ನಾನು ಅವರಿಗೆ ಹೇಳಿದ್ದೇನೆ. I can't understand. It is not a matter for debate. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: It is a matter for debate because ತಾವು ಏನೇ decision ತೆಗೆದುಕೊಳ್ಳಬೇಕಾದರೂ..

ಅಧ್ಯಕ್ಷರು: ಆಯಿತು. ನನ್ನ ಗಮನಕ್ಕೆ ತಂದಿದ್ದೀರಿ,ಅವರ ವಿಚಾರ ಹೇಳಿದ್ದೀರಿ, ಆಯಿತಲ್ಲಾ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ತಾವು ಸಿಟ್ಟು ಮಾಡಿಕೊಳ್ಳ ಬೇಡಿ. ನಾನು ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಸಿಂಧ್ಯಾರವರೆ, ತಾವು ಹಿರಿಯ ಸದಸ್ಯರಿದ್ದೀರಿ. ನನ್ನ ಗಮನಕ್ಕೆ ತಂದಿದ್ದಾರೆ. ಅವರ ಮತ್ತು ನಮ್ಮ ಮಧ್ಯೆ ಏನು ನಡೆದಿದೆ ಎಂದು ಹೇಳಿದ್ದೇನೆ. ಮತ್ತೆ ಮತ್ತೆ ಅದನ್ನೆ persist ಮಾಡುತ್ತಾ ಹೋದರೆ ಅದು ಚೆನ್ನಾಗಿರುವುದಿಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ತಾವು ಒಳ್ಳೆಯ ಕೆಲಸ ಮಾಡಿದ್ದೀರಿ. ಕಾನೂನು ಬದ್ದವಾಗಿ ಮಾಡಿದ್ದೀರಿ. ನಿಯಮಾವಳಿಗಳ ಪ್ರಕಾರ ಮಾಡಿದ್ದೀರಿ. ಅದರಲ್ಲೇನು ಸಂಶಯವಿಲ್ಲ. ನಾನು ಹೇಳುತ್ತಿರುವುದೇನೆಂದರೆ, ಈ ಸದನದ ಅಭಿಪ್ರಾಯ ಆ ರೀತಿ ಇದೆ. ದಯಮಾಡಿ ನಿಮ್ಮ ಆಜ್ಞೆಯನ್ನು ತಡೆಹಿಡಿದು ಈ ಸದನದ ಅಭಿಪ್ರಾಯವನ್ನು ಅವರಿಗೆ ತಿಳಿಸಿ ನಂತರ ತೀರ್ಮಾನ ತೆಗೆದುಕೊಳ್ಳಿ ಎಂದು ಹೇಳುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು: ಅದರ ಮೇಲೆ debate ಇಲ್ಲ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ನನ್ನ ಭಾವನೆಗಳು, ನನ್ನ ಭಾವನೆಗಳು ಎಂದು ಚರ್ಚೆ ಮಾಡುವುದಕ್ಕೆ ಬರುವುದಿಲ್ಲ. ಏನಿದು? ಏನೋ ಹಿರಿಯ ಸದಸ್ಯರು ಎದ್ದು ನಿಂತುಕೊಂಡು ಹೇಳಿದ್ದಾರೆ. ನಾನು ಎಲ್ಲಾ ವಿಚಾರವನ್ನು ಹೇಳಿದ್ದೇನೆ. ಇದರ ಬಗ್ಗೆಯೇ debate ಮಾಡುತ್ತಾ ಹೋದರೆ ಹೇಗೆ? ನಿಯಮಗಳ ಪರವಾಗಿ ಅನುಸರಿಸಿ ಅವರನ್ನು ಕೇಳಿ ತೀರ್ಮಾನ ಮಾಡಿದ ಮೇಲೂ ಇದನ್ನೇ ಒಂದು debate ಮಾಡುತ್ತಾ ಹೋದರೆ ಹೇಗೆ?

ಶ್ರೀ ಡಿ.ಕೆ. ಶಿವಕುಮಾರ್: ನಮಗೇನೋ ವಿಪ್ issue ಆಗಿದೆ. ನಿಮಗೂ ವಿಪ್ issue ಆಗಿದೆಯೇ?

ಅಧ್ಯಕ್ಷರು: ನಮಗ್ಯಾರಿಗೂ ವಿಪ್ issue ಆಗಿಲ್ಲ. ಶಿವಕುಮಾರ್‌ರವರೆ ಕುಳಿತುಕೊಳ್ಳಿ. ಯಾರು ನಮಗೆ ವಿಪ್ issue ಮಾಡುವುದಕ್ಕೆ ಸಾಧ್ಯವಿಲ್ಲ. ದಯಮಾಡಿ ಕುಳಿತುಕೊಳ್ಳಿ. ನಿಯಮಾಳಿಗಳ ಪ್ರಕಾರ ಮುಂದಿನ ವಿಷಯಕ್ಕೆ ಹೋಗೋಣ.

(ಗೊಂದಲ)

ಹಿರಿಯ ಸದಸ್ಯರು ನಮ್ಮ ಗಮನಕ್ಕೆ ತಂದಿದ್ದಾರೆ. ಅದನ್ನು ಗಮನಿಸಿದ್ದೇನೆ. (ಗೊಂದಲ) ಈಗ ಸಂತಾಪ ಸೂಚನೆಗಳನ್ನು ತೆಗೆದುಕೊಳ್ಳೋಣ. ದಯಮಾಡಿ ಕುಳಿತುಕೊಳ್ಳಿ.

ಒಬ್ಬ ಮಾನ್ಯ ಸದಸ್ಯರು: ಅವಕಾಶ ಕೊಡಿ. ನೀವು ಎಷ್ಟೋ ನಿರ್ಧಾರಗಳನ್ನು postpone ಮಾಡುತ್ತಿರುತ್ತೀರಿ. ಇದನ್ನು ಮಾತ್ರ ಏಕೆ ಇಷ್ಟು ಬೇಗ ನಿರ್ಧಾರ ತೆಗೆದುಕೊಂಡಿರಿ?

(ಗೊಂದಲ)

ಅಧ್ಯಕ್ಷರು: ಈಗ ನಿಯಮಾವಳಿಗಳ ಪ್ರಕಾರ ಹೋಗೋಣ. ಅವರ ರಾಜೀನಾಮೆ ಬಗ್ಗೆ ಹಿರಿಯರು ಹೇಳಿದ್ದಾರೆ. ನೀವು ದಯಮಾಡಿ ಕುಳಿತುಕೊಳ್ಳಿ. ಬೇರೆ ಬೇರೆ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕಾಗುವದಿಲ್ಲ. ಇದು matter for debate ಸಹ ಅಲ್ಲ.

(ಗೊಂದಲ)

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ..... ಯಾವ ಕಾರಣಕ್ಕೆ ಕೊಟ್ಟಿದ್ದಾರೆಂದು ಗೊತ್ತಾಗಿದೆಯೇ?

ಅಧ್ಯಕ್ಷರು: ಅಲ್ಲಿ ಕಾರಣವನ್ನು produce ಮಾಡುವುದಕ್ಕೆ ಆಗುವುದಿಲ್ಲ. ಯಾವುದೇ ಕಾರಣವನ್ನು ಅವರು ತಮ್ಮ ರಾಜೀನಾಮೆ ಪತ್ರದಲ್ಲಿ ನೀಡಲ್ಲ. ಅವರು ಸ್ವಇಚ್ಛೆಯಿಂದ ಕೊಡುವುದು ಬಿಟ್ಟರೆ ರಾಜೀನಾಮೆ ಪತ್ರದಲ್ಲಿ ಇಂಥ ಕಾರಣಕ್ಕೆ ಎಂದು ಅವರು ನಮಗೆ ಹೇಳುವುದಿಲ್ಲ. ಆ ವಿಚಾರದಲ್ಲಿ ನಾನೇನು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ದಯಮಾಡಿ ಕುಳಿತುಕೊಳ್ಳಿ.ಈಗ ಸಂತಾಪ ಸೂಚನೆ.

2. ಸಂತಾಪ ಸೂಚನೆಗಳು

ಮಾನ್ಯಸಭಾಧ್ಯಕ್ಷರು:

ರಾಜ್ಯದ ಮಾಜಿ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎಸ್.ಆರ್.ಬೊಮ್ಮಾಯಿ, ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀಮತಿ ಅನುಸೂಯ ಗಜಾನನ ಶರ್ಮ, ಶ್ರೀ ಕುಲಕರ್ಣಿ ಮಲ್ಲಪ್ಪ ಕರವೀರಪ್ಪ, ಶ್ರೀ ಎ.ಎಸ್.ಗುರುಸ್ವಾಮಿ, ಶ್ರೀ ಬಿ. ವೆಂಕಟರಾಯಪ್ಪ, ಶ್ರೀ ಕೆ. ಸಿಂಗಾರಿಗೌಡ ಹಾಗೂ ಶ್ರೀ ಟಿ.ವಿ. ಕೃಷ್ಣಪ್ಪ ಅವರುಗಳು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

1. ಶ್ರೀ ಸೋಮಪ್ಪ ರಾಯಪ್ಪ ಬೊಮ್ಮಾಯಿ

ರಾಜ್ಯದ ಮಾಜಿ ಮುಖ್ಯಮಂತ್ರಿಗಳು ಹಾಗೂ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಶ್ರೀ ಎಸ್.ಆರ್. ಬೊಮ್ಮಾಯಿ ಅವರು 1924ನೇ ಜೂನ್ 6 ರಂದು ಧಾರವಾಡ ಜಿಲ್ಲೆ ಶಿಗ್ಗಾಂವ್ ತಾಲ್ಲೂಕು ಕರಡಗಿ ಗ್ರಾಮದಲ್ಲಿ ಜನಿಸಿದ್ದು ಬಿ.ಎ ಹಾಗೂ ಎಲ್.ಎಲ್.ಬಿ ಪದವೀಧರರು. ಶ್ರೀಯುತರು ಎಂ.ಎನ್.ರಾಯ್ ರವರ ರ‍್ಯಾಡಿಕಲ್ ಡೆಮೋಕ್ರಾಟಿಕ್ ಪಕ್ಷದ ಸದಸ್ಯರಾಗಿದ್ದು, ಹಲವಾರು ಶಿಕ್ಷಣ ಸಂಸ್ಥೆಗಳ ಪದಾಧಿಕಾರಿಗಳಾಗಿದ್ದರು. 1967ರಲ್ಲಿ ಕುಂದಗೋಳ್ ವಿಧಾನಸಭಾ ಕ್ಷೇತ್ರದಿಂದ ಪ್ರಥಮ ಬಾರಿಗೆ